1. <u>ಸಂತಾಪ ಸೂಚನೆ</u>

ಶ್ರೀ ರಾಜ ಅಮರಪ್ಪನಾಯಕ, ಮಾಜಿ ವಿಧಾನಸಭೆಯ ಸದಸ್ಯ ಇವರ ನಿಧನದ ಬಗ್ಗೆ

\- - -

ಸಭಾಧ್ಯಕ್ಷರು;

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ರಾಜ ಅಮರಪ್ಪ ನಾಯಕ ಅವರು ದಿನಾಂಕ 9.7.2009 ರಂದು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1951ನೇ ಅಕ್ಟೋಬರ್ 30ರಂದು ರಾಯಚೂರು ಜಿಲ್ಲೆಯ ಗುರುಗುಂಟ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಕೃಷಿಕರಾಗಿದ್ದರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಪಟ್ಟಣ ಪಂಚಾಯಿತಿಯ ಅಧ್ಯಕ್ಷರಾಗಿ, ಭೂ ನ್ಯಾಯ ಮಂಡಳಿ ಹಾಗೂ ಭೂ ಮಂಜೂರಾತಿ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ರೈತರು ಮತ್ತು ಕಾರ್ಮಿಕರ ಸಮಸ್ಯೆಗಳನ್ನು ನಿವಾರಿಸುವಲ್ಲಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿದ್ದರು. ಶ್ರೀಯುತರು 7ನೇ ವಿಧಾನಸಭೆಗೆ ಮಾನ್ವಿ ಕ್ಷೇತ್ರದಿಂದ ಹಾಗೂ 8ನೇ ವಿಧಾನಸಭೆಗೆ ಲಿಂಗಸುಗೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಅಧ್ಯಕ್ಷರು: ಈ ಸಂತಾಪ ಸೂಚನೆಗಿಂತ ಮುಂಚೆ ಮಾನ್ಯ ಸದಸ್ಯರಲ್ಲಿ ನನ್ನ ಒಂದು request ಇದೆ. ಬೆಳಗ್ಗೆ 10.25 ಗಂಟೆಗೆ quorum bell ಹಾಕಲಾಗಿತ್ತು. ಆದರೆ, 22 ರಿಂದ 25 ನಿಮಿಷವಾದರೂ quorum ಆಗಲಿಲ್ಲ. ಇದು ಒಳ್ಳೆಯ ಲಕ್ಷಣವಲ್ಲವೆಂದು ನಾನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರುಗಳು 10.30ಕ್ಕೆ ಹಾಜರಿರುವಂಥದ್ದಾದರೆ ನಾವು 10.30 ಗಂಟೆಗೇ ಸದನ ಪ್ರಾರಂಭಿಸಿದ್ದರೆ ಇಷ್ಟು ಹೊತ್ತಿಗೆ ಅರ್ಧ ಪ್ರಶ್ನೋತ್ತರವನ್ನೇ ಮುಗಿಸಬಹುದಿತ್ತು. ಈ ರೀತಿ ತಡವಾದರೆ question ಕೇಳಲಿಕ್ಕೇ ಸಮಯ ಸಿಗುವುದಿಲ್ಲ. ಹೀಗಾಗಿ, ಸಮಯ ಪಾಲನೆ ಮಾಡುವುದು ಬಹಳ ಅವಶ್ಯಕತೆ ಇದೆ. ನಾನು ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತಿದ್ದೇನೆ, ಮುಂದೆ ಬರುವ ದಿನಗಳಲ್ಲಿ ಸದನಕ್ಕೆ ಸರಿಯಾದ ಸಮಯಕ್ಕೆ ಬರುವಂತಾಗಬೇಕು ಮತ್ತು starting quorum ಬೇಗನೆ ಆದರೆ proceedings ಹೆಚ್ಚು ನಡೆಸಲಿಕ್ಕೆ ಅನುಕೂಲವಾಗುತ್ತದೆ. ಮುಂದೆ ಈ ರೀತಿ ಆಗದಂತೆ ನಡೆದುಕೊಂಡು ಹೋಗಬೇಕೆನ್ನುವುದು ನನ್ನ ಸೂಚನೆ ಇದೆ.

ದಿವಂಗತರಾದ ಶ್ರೀ ರಾಜ ಅಮರಪ್ಪ ನಾಯಕರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಬಂಡೆಪ್ಪ ಕಾಶಂಪೂರ್: ಸಹಕಾರ ಸಚಿವರು ನಿನ್ನೆ ಉತ್ತರ ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು: ಮೊದಲು question hour ಆಗಲಿ. ನಂತರ ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳಬಹುದು.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ರೈತರಿಗೆ ಬೆಂಬಲ ಬೆಲೆ ಒದಗಿಸುವ ಬಗ್ಗೆ

16(294) ಶ್ರಿ ಜಯಚಂದ್ರ ಟಿ.ಟಿ. (ಶಿರಾ)
ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿಮಾರುಕಟ್ಟೆ ಸಚಿವರು)

1. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ದಲ್ಲಾಳಿಗಳು ರೈತರಿಂದ ಮತ್ತು ಖರೀದಿದಾರರಿಂದ ಕಮಿಷನ್ ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 78ರಡಿಯಲ್ಲಿ ಮಾರಾಟ ಮೌಲ್ಯದ ಮೇಲೆ ಹಣ್ಣು, ತರಕಾರಿ ಹಾಗೂ ಹೂವು ಉತ್ಪನ್ನಗಳಿಗೆ ಶೇ.5ಕ್ಕೆ ಮೀರದಂತೆ ಹಾಗೂ ಇತರೆ ಕೃಷಿ ಉತ್ಪನ್ನಗಳಿಗೆ ಶೇ.2ಕ್ಕೆ ಮೀರದಂತೆ ಖರೀದಿದಾರರಿಂದ ಕಮಿಷನ್ ಪಡೆಯಲು ಅವಕಾಶವಿರುತ್ತದೆ. ರೈತರಿಂದ ಯಾವುದೇ ರೀತಿಯ ಕಮಿಷನ್ ಪಡೆಯಲು ಅವಕಾಶವಿರುವುದಿಲ್ಲ.

ಖರೀದಿದಾರರಿಂದ ನಿಯಮಾನುಸಾರ ಕಮಿಷನ್ ತೆಗೆದುಕೊಳ್ಳುವುದು ಸರ್ಕಾರದ ಗಮನದಲ್ಲಿದೆ. ರೈತರಿಂದ ಕಮಿಷನ್ ತೆಗೆದುಕೊಳ್ಳುವುದು ಕೆಲವು ಪ್ರಕರಣಗಳಲ್ಲಿ ಈ ಹಿಂದೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.